ಈ) ಕೇಂದ್ರ ಸರ್ಕಾರದ ಸಹಾಯಧನ ನೀಡಿಕೆ ನಿಬಂಧನೆಗಳನ್ವಯ ಸಂಬಂಧಪಟ್ಟ ಅಲೋಪತಿ ಆಸ್ಪತ್ರೆಗಳೇ ತಮ್ಮ ಸಂಸ್ಥೆಗಳಲ್ಲಿ ಪಂಚಕರ್ಮ ವಿಭಾಗ ಪ್ರಾರಂಭಿಸಲು ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸಬೇಕಾಗಿದೆ ಕೇಂದ್ರ ಸರ್ಕಾರವು ಆನಂತರ ನೇರವಾಗಿ ಆ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುತ್ತದೆ ಇಲ್ಲಿಯವರೆಗೆ ಈ ಆಸ್ಪತ್ರೆಯಿಂದ ಇಂತಹ ಬೇಡಿಕೆ ಇಲಾಖೆಗೆ ಬಂದಿರುವುದಿಲ್ಲ

ಬೀದರ್‌ನಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆ

237 (83) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್‌ನಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯ ಕಾರ್ಯಾರಂಭ ಮಾಡಿದೆಯೇ

ಅ) ಇಲ್ಲದಿದ್ದಲ್ಲಿ ಕಾರಣಗಳೇನು

ಇ) ಇದು ಯಾವಾಗ ಕಾರ್ಯಾರಂಭ ಮಾಡುವುದು

ಈ) ಈ ವಿಶ್ವವಿದ್ಯಾನಿಲಯಕ್ಕಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಲಾಗಿದೆಯೇ?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಇಲ್ಲ

ಆ) ಸಿದ್ದಾತಾ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) ಪಶುವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ವಿಶ್ವವಿದ್ಯಾನಿಲಯದ ಕರಡು ವಿಧೇಯಕವನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ

ಈ) ಇಲ್ಲ

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

238 (84) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇತ್ತೀಚಿನ ಪ್ರಗತಿಯ ಕುರಿತು ಪೂರ್ಣ ವಿವರಗಳನ್ನು ನೀಡುವುದು

ಆ) ಈ ಯೋಜನೆ ಯಾವಾಗ ಪ್ರಾರಂಭವಾಗುವುದು,

ಇ) ಇದಕ್ಕಾಗಿ ರಾಜ್ಯ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು)

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮವು, ಇತ್ತೀಚಿನ ಸಂಚಾರ ಅಧ್ಯಯನ, ವಿವರವಾದ ಸಮಗ್ರ ಯೋಜನೆ, ತಾಂತ್ರಿಕ ಮಾದರಿ ಇತ್ಯಾದಿಗಳೊಂದಿಗೆ ಯೋಜನೆಯನ್ನು ಪೂರ್ಣವಾಗಿ ಅಭಿವೃದ್ಧಿಗೊಳಿಸಿದೆ ಇಂಜಿನಿಯರಿಂಗ್, ಸಂಗ್ರಹಣಾ ಮತ್ತು ನಿರ್ಮಾಣ ಬಿಡ್‌ಗಳನ್ನು ಅಂತಿಮಗೊಳಿಸಲಾಗಿದೆ

ಕೇಂದ್ರ ಸರ್ಕಾರದೊಂದಿಗಿನ ಚರ್ಚೆಯು ನಿರ್ಣಾಯಾತ್ಮಕ ಹಂತವನ್ನು ಮುಟ್ಟಿದೆ ಮತ್ತು ಈ ಕೆಳಗಿನವುಗಳ ಬಗ್ಗೆ ಅಂತಿಮ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ

1 ರಿಯಾಯಿತಿ ಒಪ್ಪಂದ

2 ರಕ್ಷಣಾ ಮಂತ್ರಾಲಯದಿಂದ ನಿರಾಕ್ಷೇಪಣೆ ಪತ್ರ

3 ಸಂಯೋಜಿತ ವಾಯುಪಥದ ನಿರ್ವಹಣಾ ಒಪ್ಪಂದ

4 ನಾಗರೀಕ ವಿಮಾನ ಯಾನ ಮಹಾ ನಿರ್ದೇಶಕರಿಂದ ನಿವೇಶನದ ಅನುಮೋದನೆ

5 ಕರ್ನಾಟಕ ರಾಜ್ಯ ಸರ್ಕಾರದ ವತಿಯಿಂದ ಭೂ ಸ್ವಾಧೀನವು ಪೂರ್ಣಗೊಂಡಿದೆ ಭೂ ಗುತ್ತಿಗೆ ಒಪ್ಪಂದ ಮತ್ತು ರಾಜ್ಯದ ಒತ್ತಾಸೆ ಒಪ್ಪಂದವು ಮುಗಿದಿದೆ

6 ಯೋಜನೆ ಕಾರ್ಯತತ್ವರತೆಯ ಐಸಿಐಸಿಐ ಬ್ಯಾಂಕಿನಿಂದ ಪೂರ್ಣಗೊಳ್ಳುವ ಹಂತಕ್ಕೆ ಬಂದಿದೆ

ಆ) 2004ರ ಜನವರಿ ಅಂತ್ಯಕ್ಕೆ ಭಾರತ ಸರ್ಕಾರದಿಂದ ರಿಯಾಯಿತಿ ಒಪ್ಪಂದಕ್ಕೆ ರಕ್ಷಣಾ ಮಂತ್ರಾಲಯದಿಂದ ನಿರಾಕ್ಷೇಪಣಾ ಪತ್ರಕ್ಕೆ ನಾಗರೀಕ ವಿಮಾನ ಯಾನ ಮಹಾ ನಿರ್ದೇಶಕರಿಂದ ನಿವೇಶನದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆ ಅದಾದ ತರುವಾಯ 2–3 ವಾರದೊಳಗೆ ಹಣಕಾಸಿನ ಮುಕ್ತಾಯವು ನೆರವೇರಲಿದೆ ಇದನ್ನು ಆಧರಿಸಿ, 2004ರ ಫೆಬ್ರವರಿ ಮಧ್ಯದಿಂದ ನಿವೇಶನದ ಬಳಿ ಯೋಜನೆಯ ಕೆಲಸವು ಪ್ರಾರಂಭವಾಗುವುದನ್ನು ನಿರೀಕ್ಷಿಸಲಾಗಿದೆ

ಇ) ದಿನಾಂಕ 1 12 2003ರಂದು ಇದ್ದಂತೆ ರಾಜ್ಯ ಸರ್ಕಾರವು ನೇರವಾಗಿ ಯೋಜನೆಯ ಮೇಲೆ ರೂ 68,125 ಕೋಟಿಗಳ ವೆಚ್ಚವನ್ನು ಮಾಡಿದೆ ಇದರ ಜೊತೆಗೆ ಯೋಜನೆಗೆ ಸಂಭಂಧಿಸಿದ ಇತರೆ ಬಾಬುಗಳ ಮೇಲೆ ಮತ್ತು ಭೂ ಸ್ವಾಧೀನಕ್ಕಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಬಂಡವಾಳ ಅಭಿವೃದ್ಧಿ ನಿಗಮವು ರೂ 125–00 ಕೋಟಿಗಳ ವೆಚ್ಚವನ್ನು ಮಾಡಿದೆ

ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

239 (85) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2002ನೇ ಇಸವಿಯಿಂದ ಇಲ್ಲಿಯವರೆವಿಗೆ ರಾಜ್ಯದಲ್ಲಿ ಹೊಸದಾಗಿ ಎಷ್ಟು ವಿದ್ಯಾರ್ಥಿ ನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಾರಂಭಿಸಲಾಗಿದೆ

ಆ) ಮೇಲ್ಕಂಡ ಅವಧಿಯಲ್ಲಿ ಎಷ್ಟು ಹೊಸ ಕಟ್ಟಡಗಳನ್ನು ವಿದ್ಯಾರ್ಥಿನಿಲಯಗಳಿಗಾಗಿ ನಿರ್ಮಿಸಲಾಗಿದೆ

ಇ) ಶಿವಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿ ಮೇಲ್ಕಂಡ ಅವಧಿಯಲ್ಲಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗಿದೆ ಹಾಗೂ ಎಷ್ಟು ಹೊಸ ಕಟ್ಟಡಗಳನ್ನು ನಿರ್ಮಿಸಲಾಗಿದೆ?

ಶ್ರೀ ಎ ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1 ಸಮಾಜ ಕಲ್ಯಾಣ ಇಲಾಖೆ

ಇಲ್ಲ

2 ಪರಿಶಿಷ್ಟ ವರ್ಗಗಳ ಇಲಾಖೆ